

ನಾಗಾಂಜಲಿಗೆ ಸರಸ್ವತಿ ವಿದ್ಯಾಕೇಂದ್ರದ ಮುಖ್ಯ ಶಿಕ್ಷಕಿ ಸುಮಾ ಪ್ರಭು ಅವರಿಂದ ಅಭಿನಂದನೆಯ ಸಿಹಿಮುತ್ತು

# ತರಗತಿ ತಪ್ಪಿಸಲಿಲ್ಲ, ಟ್ಯೂಷನ್‌ಗೆ ಹೋಗಲಿಲ್ಲ

**ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625 ಅಂಕ ಪಡೆದ ನಾಗಾಂಜಲಿ ನಾಯ್ಕ ಅಧ್ಯಯನದ ಗುಟ್ಟು**

■ ಸದಾಶಿವ ಎಂ.ಎಸ್.

ಕರಾವಳಿಯ ಪುಟ್ಟ ಪಟ್ಟಣ ಕುಮಟಾ, ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾದ ಬಳಿಕ ಇಡೀ ರಾಜ್ಯದಲ್ಲೇ ಮನೆಮಾತಾಗಿದೆ. ಇದು ಸಾಧ್ಯವಾಗಿದ್ದು ಇಲ್ಲಿನ ಅಘನಾಶಿನಿ ಕೋಟಿಮನೆಯ ನಾಗಾಂಜಲಿಯಿಂದ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆದು ರಾಜ್ಯಕ್ಕೇ ಪ್ರಥಮ ಸ್ಥಾನ ಪಡೆದುಕೊಂಡ ಅವಳ ಸಾಧನೆಯನ್ನು ಎಲ್ಲರೂ ಕೊಂಡಾಡುತ್ತಿದ್ದಾರೆ. ಆಕೆಯ ತಂದೆ, ನಿವೃತ್ತ ಬಿಎಸ್‌ಎಫ್ ಯೋಧ ಪರಮೇಶ್ವರ ನಾಯ್ಕ ಹಾಗೂ ತಾಯಿ ಚೇತನಾ ನಾಯ್ಕ ಸಂಭ್ರಮದ ಅಲೆಯಲ್ಲಿದ್ದಾರೆ.

ಈ ಸಾಧನೆ ಹೇಗೆ ಸಾಧ್ಯವಾಯಿತು, ಅಧ್ಯಯನದ ಕ್ರಮ ಹೇಗಿತ್ತು, ತಾನು ಅಧ್ಯಯನ ಮಾಡಿದ ಕೊಂಕಣ ಎಜುಕೇಶನ್ ಟ್ರಸ್ಟ್‌ನ ಸರಸ್ವತಿ ವಿದ್ಯಾಕೇಂದ್ರ ಪ್ರೌಢಶಾಲೆಯಲ್ಲಿ ಬೋಧನೆಯ ಕ್ರಮವೇನಿತ್ತು ಮುಂತಾದ ಪ್ರಶ್ನೆಗಳಿಗೆ ಅವಳು ಉತ್ತರಿಸಿದ್ದಾಳೆ.

◆ **ಅಧ್ಯಯನ ಹೇಗೆ ಮಾಡುತ್ತಿದ್ದೆ? ಟ್ಯೂಷನ್‌ಗೆ ಹೋಗಿದ್ದೆಯಾ?**

ನಾನು ತರಗತಿಗಳಿಗೆ ತಪ್ಪಿಸಿರಲಿಲ್ಲ. ಶಾಲೆಯಲ್ಲಿ ಅಂದು ಕಲಿಸಿದ ಪಾಠವನ್ನು ಅಂದೇ ಅಧ್ಯಯನ ಮಾಡುತ್ತಿದ್ದೆ. ಇದು ನಿರಂತರವಾಗಿತ್ತು. ಟ್ಯೂಷನ್‌ಗೆ ಒಂದು ದಿನವೂ ಹೋಗಲಿಲ್ಲ. ಶಾಲೆಯಲ್ಲಿ ಹಮ್ಮಿಕೊಳ್ಳುತ್ತಿದ್ದ ವಿಶೇಷ ತರಗತಿಗಳಿಗೆ ಮಾತ್ರ ತಪ್ಪದೇ ಹಾಜರಾಗುತ್ತಿದ್ದೆ.

◆ **ದಿನದ ಓದಿಗೆ ಯಾವ ಕ್ರಮವನ್ನು ಅನುಸರಿಸುತ್ತಿದ್ದೆ?**

ಎಲ್ಲ ವಿಷಯಗಳಿಗೂ ಅಧ್ಯಯನ ವೇಳಾಪಟ್ಟಿ ಮಾಡಿಕೊಂಡು ಅದರ ಪ್ರಕಾರ ಓದುತ್ತಿದ್ದೆ. ಈ ರೀತಿ ಮಾಡಿಕೊಂಡರೆ ಅನುಕೂಲವಾಗುತ್ತದೆ ಎಂದು ನಮ್ಮ ಹೆಡ್ ಮಿಸ್ ಹೇಳಿದ್ದರು. ಒಂದು ವಿಷಯವನ್ನು ಓದಿ ಮತ್ತೊಂದನ್ನು ಶುರು ಮಾಡುವ ಮೊದಲು ಐದು ನಿಮಿಷಗಳ ಅಂತರ ಇಟ್ಟುಕೊಂಡಿದ್ದೆ. ಇದು ಮನಸ್ಸು ಹೊಸ ವಿಷಯಕ್ಕೆ ತೆರೆದುಕೊಳ್ಳಲು ಸಹಕಾರಿಯಾಯಿತು. ಪ್ರತಿದಿನವೂ ಬೆಳಿಗ್ಗೆ ಒಂದೂವರೆ ತಾಸು, ಸಂಜೆ ಶಾಲೆಯಿಂದ ಬಂದ ಬಳಿಕ ರಾತ್ರಿ 10.30ರವರೆಗೆ ಎಲ್ಲ ವಿಷಯಗಳನ್ನೂ ಓದುತ್ತಿದ್ದೆ.

◆ **ಓದಿದ್ದನ್ನು ನೆನಪಿಟ್ಟುಕೊಳ್ಳಲು ಏನಾದರೂ ತಂತ್ರ ಕಂಡುಕೊಂಡಿದ್ಯಾ?**

ಹೌದು. ಪ್ರತಿ ವಿಷಯಕ್ಕೂ ಕೀ ವರ್ಡ್ಸ್